**2018–19 ರಲ್ಲಿ ಬಿಡುಗಡೆಗೆ ಶಿಫಾರಸ್ಸು ಮಾಡಿದ ತಳಿಗಳು**

| ಬೆಳೆಗಳು | ತಳಿ | ಶಿಫಾರಸ್ಸು ಮಾಡಿದ ವಲಯ |
|---|---|---|
| ಭತ್ತ | ಗಂಗಾವತಿ ಸೋನಾ (ಐ.ಇ.ಟಿ–20594) | 6 |
| ಅಲಸಂದೆ | ಪಿಜಿಸಿಪಿ–6 | 5 ಮತ್ತು 6 |
| ಉದ್ದು | ಎಲ್.ಬಿ.ಜಿ–791 | 5 ಮತ್ತು 6 |
| ಸೂರ್ಯಕಾಂತಿ | ಕೆ.ಬಿ.ಎಸ್.ಹೆಚ್–78 | 5 |
| ಕಬ್ಬು | ಸಿ.ಓ.ವಿ.ಸಿ–16061 | 6 |
| ಕಬ್ಬು | ಸಿ.ಓ.ವಿ.ಸಿ–16062 | 6 |
| ಹಲಸು | ಲಾಲ್‌ಬಾಗ್ ಮಧುರ | 5 |

1. **ಭತ್ತ– ಗಂಗಾವತಿ ಸೋನಾ (ಐ.ಇ.ಟಿ–20594)**: ಮಧ್ಯಮಾವಧಿಯ (130–135 ದಿನಗಳು) ತಳಿಯಾಗಿದ್ದು, ಸುಮಾರು 90–100 ಸೆಂ.ಮೀ. ಎತ್ತರ ಬೆಳೆಯುತ್ತದೆ. ಈ ತಳಿಯು ಮಧ್ಯಮ ವರ್ಗಕ್ಕೆ ಸೇರಿದ್ದು, ಗಿರಣಿಯ ಗುಣಧರ್ಮ ಹಾಗೂ ಅನ್ನದ ಗುಣಮಟ್ಟ ಉತ್ತಮವಾಗಿರುತ್ತದೆ. ಉತ್ತಮ ನಿರ್ವಹಣೆಯಲ್ಲಿ ಹೆಕ್ಟೇರಿಗೆ 6.5–7.0 ಟನ್ ಧಾನ್ಯ ಹಾಗೂ 8.0–8.5 ಟನ್ ಹುಲ್ಲಿನ ಇಳುವರಿಯನ್ನು ಪಡೆಯಬಹುದು. ಕರ್ನಾಟಕದ ಕೃಷಿ ವಲಯ–3 ರಲ್ಲಿ ಈಗಾಗಲೆ ಅಧಿಕೃತವಾಗಿ ಬಿಡುಗಡೆಯಾಗಿದ್ದು, ಈಗ ವಲಯ–6ಕ್ಕೆ ಶಿಫಾರಸ್ಸು ಮಾಡಲಾಗಿದೆ.

2. **ಅಲಸಂದೆ– ಪಿಜಿಸಿಪಿ–6:** ಈ ತಳಿಯು ಅಲ್ಪಾವಧಿ ಗುಣವನ್ನು ಹೊಂದಿದ್ದು, 70–75 ದಿನಗಳಲ್ಲಿ ಕಟಾವಿಗೆ ಬರುತ್ತದೆ ಮತ್ತು ಅಧಿಕ ಬೀಜದ ಇಳುವರಿ (700–800 ಕಿ.ಗ್ರಾಂ/ಹೆ) ಕೊಡುತ್ತದೆ. ಈ ತಳಿಯು ಪೂರ್ವ ಮುಂಗಾರು ಹಾಗು ತಡ ಮುಂಗಾರುವಿನಲ್ಲಿ ಬಿತ್ತನೆ ಮಾಡಲು ಸೂಕ್ತವಾದ ತಳಿಯಾಗಿದೆ. ಈ ತಳಿಯ ಬೀಜಗಳು ತಿಳಿ ಕಂದು ಬಣ್ಣದಿಂದ ಕೂಡಿರುತ್ತವೆ. ಈ ತಳಿಯು ಅಂತರ ಬೆಳೆಯಾಗಿ ಬೆಳೆಯಲು ಉತ್ತಮ ಗುಣಗಳನ್ನು ಹೊಂದಿದೆ. ವಲಯ– 5 ಮತ್ತು ವಲಯ– 6 ಕ್ಕೆ ಶಿಫಾರಸ್ಸು ಮಾಡಲಾಗಿದೆ.

3. **ಉದ್ದು– ಎಲ್.ಬಿ.ಜಿ–791:** ಈ ತಳಿಯು 75–80 ದಿನಗಳಲ್ಲಿ ಕಟಾವಿಗೆ ಬರುತ್ತದೆ ಮತ್ತು ಹೆಚ್ಚು ಬೀಜದ ಇಳುವರಿ (10–12 ಕ್ವಿ/ಹೆ) ಕೊಡುತ್ತದೆ ಹಾಗೂ ಹಳದಿ ಎಲೆ ರೋಗಕ್ಕೆ ನಿರೋಧಕತೆ ಹೊಂದಿರುತ್ತದೆ. ಹಸಿರು ಕಾಯಿಗಳ ಹೊರ ಮೈಯಲ್ಲಿ ಕಡಿಮೆ ರೋಮಗಳಿರುತ್ತವೆ. ಈ ತಳಿಯನ್ನು ವಲಯ– 5 ಮತ್ತು ವಲಯ– 6 ಕ್ಕೆ ಶಿಫಾರಸ್ಸು ಮಾಡಲಾಗಿದೆ.

4. **ಸೂರ್ಯಕಾಂತಿ– ಕೆ.ಬಿ.ಎಸ್.ಹೆಚ್–78 (ಸಂಕರಣ ತಳಿ):** ಈ ತಳಿಯು ಹೆಚ್ಚು ಬೀಜ ಮತ್ತು ಎಣ್ಣೆ ಇಳುವರಿ ಕೊಡುವ ಅಲ್ಪಾವಧಿ (85 ದಿನಗಳು) ಸಂಕರಣ ತಳಿಯಾಗಿದ್ದು, 10–15 ದಿನಗಳ ಮುಂಚಿತವಾಗಿ ಕೊಯ್ಲಿಗೆ ಬರುತ್ತದೆ. ಇದರ ಸರಾಸರಿ ಬೀಜದ ಇಳುವರಿಯು ಪ್ರತಿ ಹೆಕ್ಟೇರಿಗೆ 2536 ಕಿ.ಗ್ರಾಂ ಹೋಲಿಕೆ ತಳಿಗಿಂತ ಶೇ.14.96 ಹೆಚ್ಚು ಹಾಗೂ 993 ಕಿ.ಗ್ರಾಂ ಎಣ್ಣೆ ಇಳುವರಿಯನ್ನು (ಹೋಲಿಕೆ ತಳಿಗಿಂತ ಶೇ. 14.33 ಹೆಚ್ಚು) ಕೊಡುತ್ತದೆ. ಈ ತಳಿಯು ಸಧೃಡಕಾಂಡ ಮತ್ತು ಮಧ್ಯಮ ಎತ್ತರ ಹೊಂದಿದ್ದು, ನೆಟ್ಟಗಿನ ಉತ್ತಮ ಸಸ್ಯ ವಿಧವಾಗಿದೆ. ಅಂಗಾಂಶ ಕೊಳೆತ, ಆಲ್ಟರ್ನೇರಿಯ ಎಲೆ ಚುಕ್ಕೆ ರೋಗ ಹಾಗೂ ಬೂದಿ ರೋಗಕ್ಕೆ ನಿರೋಧಕತೆಯನ್ನು ಹೊಂದಿದೆ. ವಲಯ–5 ರಲ್ಲಿ ಈಗಾಗಲೇ ಅಧಿಕೃತವಾಗಿ ಬಿಡುಗಡೆಯಾಗಿದ್ದು, ವಲಯ–6ಕ್ಕೆ ಶಿಫಾರಸ್ಸು ಮಾಡಲಾಗಿದೆ.

5. **ಕಬ್ಬು– ಸಿ.ಓ.ವಿ.ಸಿ–16061:** ಈ ತಳಿಯು ಅಲ್ಪಾವಧಿ ತಳಿಯಾಗಿದ್ದು, 10 ತಿಂಗಳಿಗೆ ಕಟಾವಿಗೆ ಬರುತ್ತದೆ ಮತ್ತು ಹೆಚ್ಚಿನ ಇಳುವರಿ (160–165 ಟನ್/ಹೆ) ಕೊಡುತ್ತದೆ. ಜನವರಿ–ಫೆಬ್ರವರಿ ತಿಂಗಳ ನಾಟಿಗೆ ಸೂಕ್ತವಾದ ತಳಿಯಾಗಿದೆ. ಈ

ತಳಿಯು ಉತ್ತಮ ತೆಂಡೆಯೊಡೆಯುವ ಸಾಮರ್ಥ್ಯವನ್ನು ಹೊಂದಿದ್ದು 5 ಅಡಿ ಅಂತರ ಬೇಸಾಯ ಹಾಗೂ ಕೂಳೆ ಬೆಳೆಗೂ ಸೂಕ್ತವಾದ ತಳಿಯಾಗಿದೆ. ನೀರಿನ ಕೊರತೆ ತಡೆದುಕೊಳ್ಳುವ ಗುಣವನ್ನು ಹೊಂದಿರುತ್ತದೆ. ಬೆಲ್ಲ ತಯಾರಿಕೆಗೆ ಯೋಗ್ಯವಾದ ತಳಿಯಾಗಿದೆ. ಈ ತಳಿಯನ್ನು ವಲಯ–6ಕ್ಕೆ ಶಿಫಾರಸ್ಸು ಮಾಡಲಾಗಿದೆ.

6. **ಕಬ್ಬು– ಸಿ.ಓ.ವಿ.ಸಿ–16062:** ಈ ತಳಿಯು ಮಧ್ಯಮಾವಧಿ ತಳಿಯಾಗಿದ್ದು, ಜುಲೈ ನಿಂದ ನವೆಂಬರ್ ವರೆಗೆ ನಾಟಿ ಮಾಡಲು ಸೂಕ್ತವಾದ ತಳಿಯಾಗಿದ್ದು, ಹೆಚ್ಚಿನ ಇಳುವರಿ (165–170 ಟನ್/ಹೆ) ಕೊಡುತ್ತದೆ. ಈ ತಳಿಯು ಉತ್ತಮ ತೆಂಡೆಯೊಡೆಯುವ ಸಾಮರ್ಥ್ಯವನ್ನು ಹೊಂದಿದ್ದು, 5 ಅಡಿ ಅಂತರ ಬೇಸಾಯ ಹಾಗೂ ಕೂಳೆ ಬೆಳೆಗೂ ಸೂಕ್ತವಾಗಿದ್ದು, ಬರ ಸಹಿಷ್ಣುತೆ ಗುಣ ಮತ್ತು ಬೆಲ್ಲ ತಯಾರಿಕೆಗೆ ಯೋಗ್ಯವಾಗಿದೆ. ಈ ತಳಿಯನ್ನು ವಲಯ–6ಕ್ಕೆ ಶಿಫಾರಸ್ಸು ಮಾಡಲಾಗಿದೆ.

7. **ಹಲಸು–ಲಾಲ್‌ಬಾಗ್ ಮಧುರ:** ಸುಮಾರು 10–15 ವರ್ಷದ ಮರವು 80–100 ಕಾಯಿಗಳನ್ನು ಬಿಡುತ್ತದೆ ಮತ್ತು ಸರಾಸರಿ ಪ್ರತಿ ಮರಕ್ಕೆ 640–800 ಕೆ.ಜಿಯ ವರೆಗೆ ಇಳುವರಿಯನ್ನು ಕೊಡುತ್ತದೆ. ಇದರ ಹಣ್ಣಿನ ತೂಕವು 8–10 ಕಿ.ಗ್ರಾಂ (ಸರಾಸರಿ– 7.70 ಕಿ.ಗ್ರಾಂ) ಯಷ್ಟಿದ್ದು, ಒಂದು ತೊಳೆಯ ತೂಕವು 68–120 ಗ್ರಾಂ ಇರುತ್ತದೆ. ತೊಳೆಗಳು ಹಳದಿ ಬಣ್ಣ ಹೊಂದಿದ್ದು, ತೊಳೆಗಳ ಸಕ್ಕರೆ ಅಂಶವು 29 ರಿಂದ 30 ಬ್ರಿಕ್ಸ್ ನಷ್ಟಿದೆ. ಹಣ್ಣಿನ ತೊಳೆಗಳ ಮಾರಾಟಕ್ಕೆ ಮತ್ತು ಹಣ್ಣಿನ ಮೌಲ್ಯವರ್ಧಿತ ಉತ್ಪನ್ನಗಳಾದ ಸ್ಕ್ವಾಷ್, ಜಾಮ್ ಹಾಗೂ ತಿರುಳಿನ ಉಪಯೋಗಕ್ಕೆ ಅತ್ಯುತ್ತಮ ತಳಿಯಾಗಿದೆ. ಈ ತಳಿಯನ್ನು ವಲಯ–5ಕ್ಕೆ ಶಿಫಾರಸ್ಸು ಮಾಡಲಾಗಿದೆ.